# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ.

## ಸಿ.ಸಿ. ನಂ.776/ 2021

ಸಿಡಬ್ಲ್ಯೂಃ 1
ಪಿಡಬ್ಲ್ಯೂಃ1

<u>ದಿನಾಂಕಃ **26-09-2024**</u>

<u>ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು</u>

| | |
|---|---|
| ಸಾಕ್ಷಿಯ ಹೆಸರು | - ಶ್ರೀಮತಿ. ಸೌಭಾಗ್ಯಮ್ಮ |
| ತಂದೆಯ/ಗಂಡನ ಹೆಸರು | - ಬಸವರಾಜಯ್ಯ |
| ವಯಸ್ಸು | -? 41 ವರ್ಷ |
| ಉದ್ಯೋಗ | - ಒಕ್ಕಲುತನ |
| ವಾಸಸ್ಥಳಃ | - ಅಲ್ಲಿಪೂರ. |

<u>ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದಃ</u>

ಕಳೆದ 4 ವರ್ಷಗಳ ಹಿಂದೆ ನಾನು ಮತ್ತು ಚಾಸಾ-6 ರವರು ನಮ್ಮ ತಾಂಡಾದ ಆಟೋದಲ್ಲಿ ಅಲ್ಲಿಪೂರದಿಂದ ಯಾದಗಿರಿ ಪಟ್ಟಣಕ್ಕೆ ಸಂತೆಯ ಗೊಸ್ಕರ ಬರುತ್ತಿದ್ದೇವು. ಕಂಚಗರಹಳ್ಳಿ ಗೇಟ್ ಹತ್ತಿರ ಬುಲೆರೋ ವಾಹನದವನ್ನು ಅತೀವೇಗವಾಗಿ ಹಿಂದಿನಿಂದ ಬಂದು ನಮ್ಮ ಆಟೋಕ್ಕೆ ಡಿಕ್ಕಿಪಡಿಸಿರುತ್ತಾರೆ. ಸದರಿ ಅಪಘಾತದಿಂದ ನಮ್ಮ ಆಟೋ ಪಲ್ಟಿಯಾಗಿ ಕೆಳಗೆ ಬಿದ್ದಿತ್ತು ಇದರಿಂದ ನನಗೆ ಬಲಗೈ ಮುರಿದಿರುತ್ತದೆ ಮತ್ತು ನನ್ನ ಹೊಟ್ಟೆಗೆ ಗಾಯ ಆಗಿತ್ತು ಅದಕ್ಕೆ ನಾಲ್ಕು ಹೊಲೆಗೆ ಹಾಕಿದ್ದರು ಅದೇ ರೀತಿ ನನ್ನ ಬಲಗಣ್ಣಿಗೆ ಪೆಟ್ಟು ಬಿದ್ದಿತ್ತು. ನನ್ನ ಅತ್ತೆಯ ಎದೆಗೆ ಪೆಟ್ಟು ಆಗಿತ್ತು. ಅದೇ ರೀತಿ ನನ್ನ ಅತ್ತೆಯ ಎಡಗಾಲಿಗೆ ಸಹ ಪೆಟ್ಟು ಆಗಿತ್ತು. ಅದೇ ರೀತಿ ಆಟೋದಲ್ಲಿ ಇದ್ದ ಎಲ್ಲಾರು ಕೆಳಗೆ ಬಿದ್ದಿದ್ದೇವು. ಬುಲೆರೋ ವಾಹನದವನ್ನು ನಮ್ಮ ಆಟೋಕ್ಕೆ ಡಿಕ್ಕಿ ಪಡಿಸಿದ ನಂತರ ಆತನ್ನು ವಾಹನದಿಂದ ಸ್ವಲ್ಪ ನೋಡಿ ನಂತರ ಆತನ್ನು ವಾಹನ ನಿಲ್ಲಿಸಿದೇ ತನ್ನ ವಾಹವನ್ನು ಚಲಾಯಿಸಿಕೊಂಡು ಹೋಗಿರುತ್ತಾನೆ. ನಂತರ ಆಟೋದವನ್ನು ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದನ್ನು. ಅದೇ ರೀತಿ ಕಲಬುರಗಿ ಆಸ್ಪತ್ರೆಯಲ್ಲಿ ಸಹ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ನಾನು ದೂರನ್ನು ಕೊಟ್ಟಿರುತ್ತೇನೆ. ಹಿಂದಿನಿಂದ ಬಂದ ಬುಲೆರೋ ವಾಹನದ ತಪ್ಪಿ ನಿಂದ ಈ ಪ್ರಕರಣದ ಅಪಘಾತ ಆಗಿರುತ್ತದೆ. ಬುಲರೋ ವಾಹನದ ಚಾಲಕನನ್ನು ನೋಡಿದರೆ ನೀವು ಗುರುತು ಹಿಡಿಯುತ್ತೀರ ಎಂದರೆ ಸಾಕ್ಷಿಯು ಬುಲೆರೋ ವಾಹನದ

ಚಾಲಕನ್ನು ವಾಹನ ಸಮೇತ ಓಡಿಹೋಗಿವ ಕಾರಣ ಹೇಗೆ ಗುರುತು ಹಿಡಿಯಲು ಸಾಧ್ಯ ಎಂದು ಹೇಳುತ್ತಾರೆ. ಅದೇ ರೀತಿ ಪೊಲೀಸರು ಸಹ ನನ್ನನ್ನು ಕರೆಯಿಸಿ ಆರೋಪಿತನ್ನು ತೋರಿಸಿರುವುದಿಲ್ಲ. ಸಾಕ್ಷಿಯು ಎರಡು ಛಯಾಚಿತ್ರ ಗಳಲ್ಲಿ ಇರುವ ಬುಲರೋ ವಾಹನವನ್ನು ನೋಡಿ ಗುರುತಿಸಿರುತ್ತಾರೆ ಸಾಕ್ಷಿಯು ದೂರಿನ ಮೇಲೆ ಇರುವ ತನ್ನ ಹೆಬ್ಬಟ್ಟನ್ನು ನೋಡಿ ಗುರುತಿಸಿರುತ್ತಾರೆ. ಆದ್ದರಿಂದ ದೂರನ್ನು ನಿಪಿ 1 ಎಂದು ಗುರುತಿಸಲಾಯಿತು. ಹೆಬ್ಬಟ್ಟನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಎರಡು ಛಯಾಚಿತ್ರ ಗಳನ್ನು ನಿಪಿ 2 ಮತ್ತು 3 ಎಂದು ಗುರುತಿಸಲಾಯಿತು. ಈ ಅಪಘಾತವು ಬೆಳಗ್ಗೆ 10 ಗಂಟೆ ಆಗಿರುತ್ತದೆ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಹಿರಿಯ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

<u>ಪಾಟೀ ಸವಾಲುಃ ಹಿರಿಯ ಸ.ಸ, ಅಭಿಯೋಜಕರವರಿಂದಃ</u>

ದಿನಾಂಕಃ 22.02.2021 ರಂದು ಬೆಳಗ್ಗೆ 9 ಗಂಟೆಗೆ ಈ ಪ್ರಕರಣದ ಅಪಘಾತ ಆಗಿರುತ್ತದೆ ಎಂದರೆ ಸಾಕ್ಷಿಯು ನಾನು ಶಾಲೆಯನ್ನು ಕಲಿತಿರುವುದಿಲ್ಲ ಆದ್ದರಿಂದ ಅಪಘಾತವು 9 ಗಂಟೆಗೆ ಅಥವಾ 10 ಗಂಟೆಗೆ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ದಿನಾಂಕಃ 22.10.2021 ರಂದು ಬುಲೆರೋ ವಾಹನದ ಚಾಲಕನನ್ನು ಪೊಲೀಸರು ನನಗೆ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಬುಲೆರೋ ವಾಹನದ ಚಾಲಕನ ಹೆಸರು ಪ್ರಶಾಂತ ಕುಮಾರ ಅಂತಾ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ನಾನು ದೂರನ್ನು ಕೊಟ್ಟ ನಂತರ ಪೊಲೀಸರು ಆರೋಪಿತನ್ನು ನನಗೆ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ಆರೋಪಿತನನ್ನು ನನಗೆ ತೋರಿಸಿರುತ್ತಾರೆ ಎಂದು ನಾನು ಪೊಲೀಸರ ಮುಂದೆ ಪುರವಣಿ ಹೇಳಿಕೆಯನ್ನು ದಿನಾಂಕಃ 22.10.2021 ರಂದು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆಯನ್ನು ನಿರಂಕರಿಸಿದ ಕಾರಣ ನಿಪಿ 4 ಎಂದು ಗುರುತಿಸಲಾಯಿತು. ನಿಪಿ4 ರಂತೆ ನಾನು ಪುರವಣಿ ಹೇಳಿಕೆಯನ್ನು ಕೊಟ್ಟಿದ್ದರು ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟೀ ಸವಾಲುಃ  ಆರೋಪಿ ಪರ ವಕೀಲರಾದ ಶ್ರೀ.ಎಸ್ ಬಿ ಜಿ  ರವರಿಂದಃ</u>

ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯವನ್ನು ಕೋರಿರುತ್ತಾರೆ. ಸಾಕ್ಷಿಗೆ ರೂ.200/- ಭತ್ಯೆಯನ್ನು ನೀಡಬೇಕು. ಆದ್ದರಿಂದ ಪಾಟೀಸವಾಲಿಗಾಗಿ ಸಮಯವನ್ನು ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ  ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.